## ಮಗು ಲೈಂಗಿಕ ದೌರ್ಜನ್ಯಕ್ಕೆ ಒಳಗಾದಾಗ ಕಾನೂನಿನ ಮೇರೆಗೆ ತೆಗೆದುಕೊಳ್ಳಬೇಕಾದ ಅಗತ್ಯ ಕ್ರಮಗಳು

- ಲೈಂಗಿಕ ಅಪರಾಧ ಘಟಿಸಿದ 24 ಘಂಟೆಗಳಲ್ಲಿ ಮಕ್ಕಳ ವಿಶೇಷ ಪೊಲೀಸರಿಗೆ (Special Juvenile Police) ಅಥವಾ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. (ಕಲಂ 19)
- ಲೈಂಗಿಕ ಅಪರಾಧ ಘಟಿಸಿದ 24 ಘಂಟೆಗಳಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ (CWC) ಅಥವಾ ವಿಶೇಷ ನ್ಯಾಯಾಲಯಕ್ಕೆ (Special Court) ಮಗುವನ್ನು ಹಾಜರುಪಡಿಸಿ ಮಗುವಿನ ಸಂರಕ್ಷಣೆ ಮಾಡಬೇಕು.
- ಲೈಂಗಿಕ ಅಪರಾಧ ಘಟಿಸಿದ 24 ಘಂಟೆಗಳಲ್ಲಿ ಮಗುವನ್ನು ಹತ್ತಿರದ ಆಸ್ಪತ್ರೆಗೆ (Hospital) ಸೇರಿಸುವುದು, ಹೆಣ್ಣು ಮಗುವಾದಲ್ಲಿ ಮಹಿಳಾ ವೈದ್ಯರಿಂದ ತಂದೆ ತಾಯಿ ಎದುರಲ್ಲಿ ಅಥವಾ ಮಗುವಿನ ಸಂಪೂರ್ಣ ವಿಶ್ವಾಸಗಳಿಸಿರುವವರ ಸಮಕ್ಷಮದಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕು.
- ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಗುವಿನ ವರದಿಯನ್ನು ಯಾವುದೇ ಮಾಧ್ಯಮಗಳ ಮೂಲಕ, ಛಾಯಾಚಿತ್ರಗಳ ಮೂಲಕ ಮಗುವನ್ನು ಗುರುತಿಸಲಿರುವ ಮಾಹಿತಿಗಳನ್ನು ವರದಿ ಮಾಡತಕ್ಕದಲ್ಲ, ಒಂದು ವೇಳೆ ವರದಿ ಮಾಡಿದ್ದಲ್ಲಿ ಮಕ್ಕಳ ವಿಶೇಷ ಪೊಲೀಸರಿಗೆ (Special Juvenile Police) ತಿಳಿಸುವುದು.
- ಮಗುವಿಗೆ ತುರ್ತು ಪರಿಹಾರ ಅಥವಾ ಸುಧಾರಣೆ ಅಗತ್ಯ ಕಂಡುಬಂದರೆ ಮಗುವಿನ ಪರವಾಗಿ ಅರ್ಜಿ ಸಲ್ಲಿಸಿ ವಿಶೇಷ ನ್ಯಾಯಾಲಯದಿಂದ (Special Court) ಮಧ್ಯಂತರ ಪರಿಹಾರ ಪಡೆದುಕೊಳ್ಳಬಹುದು. (ನಿಯಮ 7)
- ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮ ಮತ್ತು ನಿಯಮಗಳು–2012 ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವಂತೆ ನಿಗಾವಹಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. (ಕಲಂ 44)

ಕೃಪೆ:

**ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ**

4ನೇ ಮಹಡಿ, ಕೃಷಿ ಭವನ, ರಾಣಿ ಚೆನ್ನಮ್ಮ ವೃತ್ತ, ನೃಪತುಂಗ ರಸ್ತೆ, ಬೆಂಗಳೂರು–02
ದೂರವಾಣಿ : 080–22115292, ಫ್ಯಾಕ್ಸ್: 080–22115291.
Email: kscpcr@gmail.com. Website: www.kscpcr.com

**ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ**

ನ್ಯಾಯ ದೇಗುಲ, 1ನೇ ಮಹಡಿ, ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು–27
ದೂರವಾಣಿ : 080–22111714, 22111716, ಫ್ಯಾಕ್ಸ್: 080–22112935
Email: karslsa@gmail.com. Website: www.kslsa.kar.nic.in

**ದೌರ್ಜನ್ಯ ಮುಕ್ತ ಸಮಾಜ – ನಮ್ಮ ಬದ್ಧತೆ**

ಕೆ.ಎಸ್.ಸಿ.ಪಿ.ಸಿ.ಆರ್.



ಕೆ.ಎಸ್.ಎಲ್.ಎಸ್.ಎ.

# ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮ ಮತ್ತು ನಿಯಮಗಳು–2012ರ (POCSO ACT & RULES-2012) ಅಡಿಯಲ್ಲಿ ಮಗುವಿನ ಮೇಲಾಗುವ ಲೈಂಗಿಕ ದೌರ್ಜನ್ಯ ಮತ್ತು ಶಿಕ್ಷೆ

'ಮಗು' ಎಂದರೆ 18 ವರ್ಷ ಪೂರ್ಣಗೊಳಿಸದ ವ್ಯಕ್ತಿ.

| ಲೈಂಗಿಕ ಅಪರಾಧಗಳು | ಶಿಕ್ಷೆಗಳು |
|---|---|
| ❖ ಯಾವುದೇ ವ್ಯಕ್ತಿ ಮಗುವನ್ನು ಯಾವುದೇ ರೀತಿಯಿಂದ ಪ್ರಚೋದಿಸುವುದು, ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ (Penetrative sexual assault) ಎಂದೆನಿಸುತ್ತದೆ. (ಕಲಂ 3) | 7ವರ್ಷಕ್ಕೆ ಕಡಿಮೆ ಇಲ್ಲದಂತೆ ಅಜೀವ ಕಾರಾಗೃಹ ವಾಸ ಮತ್ತು ದಂಡ. (ಕಲಂ 4) |
| ❖ ಮಗುವಿನ ಮೇಲೆ ಯಾವುದೇ ವ್ಯಕ್ತಿ ಬಲಾತ್ಕಾರವಾಗಿ ಲೈಂಗಿಕ ದೌರ್ಜನ್ಯ ಎಸಗಿದರೆ, ಬಲಾತ್ಕಾರಯುತ ಲೈಂಗಿಕ ಹಲ್ಲೆ (aggravated penetrative sexual assault) ಎಂದೆನಿಸುತ್ತದೆ. (ಕಲಂ 5) | 10 ವರ್ಷಕ್ಕೆ ಕಡಿಮೆಯಾಗದ ಜೀವಾವಧಿ ಶಿಕ್ಷೆಯವರೆಗೂ ವಿಸ್ತರಿಸಬಹುದಾದ ಕಠಿಣ ಶಿಕ್ಷೆ. (ಕಲಂ 6) |
| ❖ ಲೈಂಗಿಕ ಉದ್ದೇಶದಿಂದ ಮಗುವಿನ ದೇಹದ ನಾನಾ ಭಾಗಗಳನ್ನು ಮುಟ್ಟುವುದು ಹಾಗೂ ಮುಟ್ಟುವಂತೆ ಪ್ರೇರೇಪಿಸುವುದು, ಲೈಂಗಿಕ ದೌರ್ಜನ್ಯ (sexual assault) ಎಂದೆನಿಸುತ್ತದೆ. (ಕಲಂ 7) | 3 ವರ್ಷಕ್ಕೆ ಕಡಿಮೆಯಿಲ್ಲದ ಕಾರಾಗೃಹವಾಸ ಮತ್ತು ದಂಡ. (ಕಲಂ 8) |
| ❖ ಯಾವುದೇ ವ್ಯಕ್ತಿ ಮಗುವಿನ ಮೇಲೆ ತೀವ್ರ ಸ್ವರೂಪದ ಲೈಂಗಿಕ ಹಲ್ಲೆ (Aggravated sexual assault) ಎಸಗಿದರೆ. (ಕಲಂ 9) | 5 ವರ್ಷಕ್ಕೆ ಕಡಿಮೆಯಿಲ್ಲದ 7 ವರ್ಷಗಳವರೆಗೆ ವಿಸ್ತರಿಸಬಹುದಾದ ಸಜೆ ಮತ್ತು ದಂಡ. (ಕಲಂ 10) |
| ❖ ಯಾವುದೇ ವ್ಯಕ್ತಿ ಮಗುವಿಗೆ ಲೈಂಗಿಕ ಕಿರುಕುಳ (sexual harassment) ನೀಡಿದಲ್ಲಿ ಅಪರಾಧವಾಗುವುದು. (ಕಲಂ 11) | 3 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ವಾಸ ಮತ್ತು ದಂಡ. (ಕಲಂ 12) |
| ❖ ಮಗುವನ್ನು ಯಾವುದೇ ರೀತಿಯ ಅಶ್ಲೀಲ ಚಿತ್ರಗಳ ರಚನೆಗಾಗಿ ಬಳಸಿಕೊಂಡಲ್ಲಿ ಅದು ಅಪರಾಧವಾಗುವುದು (ಕಲಂ 13) | 5 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ವಾಸ ಮತ್ತು ದಂಡ. (ಕಲಂ 14) |
| ❖ ಯಾವುದೇ ಮಗುವಿನ ಅಶ್ಲೀಲ ಚಿತ್ರಗಳನ್ನು ಸಂಗ್ರಹಿಸಿದಲ್ಲಿ, ಅದು ಅಪರಾಧವಾಗುವುದು. (ಕಲಂ 15) | 3 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ವಾಸ ಮತ್ತು ದಂಡ. (ಕಲಂ 15) |
| ❖ ಮಗುವನ್ನು ಸಾಗಾಟಣೆ (Child Traffiking) ಮಾಡಲು ಪ್ರತಿನಿಧಿಯಾಗಿ ಭಾಗವಹಿಸಿದಲ್ಲಿ ಹಾಗೂ ಯಾವುದೇ ವ್ಯಕ್ತಿಯು ಲಾಭಕ್ಕಾಗಿ ಇನ್ನೊಂದು ವ್ಯಕ್ತಿಯ ಸಂಗಡ ಭಾಗಿಯಾದರೂ ಅಪರಾಧಗಳ ದುಷ್ಪ್ರೇರಣೆ ಎಂದೆನಿಸುತ್ತದೆ. (ಕಲಂ 16) | ಈ ಅಧಿನಿಯಮಗಳ ಕಲಂಗಳಲ್ಲಿ ಅಪರಾಧಕ್ಕಾಗಿ ನಿಗದಿಪಡಿಸಿರುವ ಶಿಕ್ಷೆಯನ್ನು ವಿಧಿಸಲಾಗುವುದು. (ಕಲಂ 17) |